ಶ್ರೀ ಸುರಪುರ್ ಮಲ್ಲಪ್ಪ.—ಇಲ್ಲಿ ಕೊಟ್ಟಿರುವ ಉತ್ತರಗಳು ಸತ್ಯಕ್ಕೆ ದೂರವಾಗಿದೆ. ಗಾಂಧೀಜಿ ತತ್ವವನ್ನು ಹೇಳುವ ನಿಮ್ಮಂಥ ಸಣ್ಣವರಿಂದ ಇಂತಹ ಉತ್ತರವನ್ನು ಕೊಡಿಸಿದ್ದು ಮತ್ತು ನಿಮ್ಮ ಬಾಯಿಂದ ಈ ಉತ್ತರಗಳು ಸರಿಯಾಗಿವೆ ಎಂದು ಹೇಳಿದ್ದು ಸರಿಯಲ್ಲ.

ಶ್ರೀ ಜಯಪ್ರಕಾಶ್ ನಾರಾಯಣ್.—ಈಗ ಕ್ವಾಮ ಪರಿಹಾರ ಕಾಮಗಾರಿಗಳನ್ನು ತೆಗೆದುಕೊಳ್ಳವ ಕಡೆ ಕೂಲಿಯನ್ನು ಕಡಿಮೆ ಕೊಡಲಾಗುತ್ತಿದೆ. ಆದ್ದರಿಂದ ಅಗ್ರಿಕಲ್ಚರರ್ ಲೇಬರ್ ಮಿನಿಮಮ್ ವೇಜಸ್ ಆಕ್ಟ್ ಏನಿದೆ ಅದನ್ನು ಬದಲಾವಣೆ ಮಾಡಿ ಕೂಲಿ ದರವನ್ನು ಹೆಚ್ಚು ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಮೊನ್ನೆತಾನೇ ಇವರ ಕನಿಷ್ಟ ವೇತನವನ್ನು ದಿನ ಒಂದಕ್ಕೆ ಎರಡು ರೂಪಾಯಿ ಐವತ್ತು ಪೈಸೆಗೆ ಏರಿಸಿದ್ದೇವೆ. ಇದಕ್ಕಿಂತ ಕಡಿಮೆ ಸಿಗುವುದಿಲ್ಲ.

ಶ್ರೀ ಕೆ. ಪಿ. ನಾಡಗೌಡ.—ಮುಧೋಳ ತಾಲ್ಲೂಕಿನ ದಕ್ಷಿಣ ಭಾಗದ ಪ್ರದೇಶ ಯಾವಾಗಲೂ ಕ್ಷಾಮದಿಂದ ಕೂಡಿರುತ್ತದೆ. ಇಲ್ಲಿ ನೀರಾವರಿ ಕಾಮಗಾರಿಗಳು ಸಾಕಷ್ಟು ಇಲ್ಲದಿರುವುದರಿಂದ ಇಲ್ಲಿ ಹೆಣ್ಣುಮಕ್ಕಳಿಗೆ ಒಂದು ರೂಪಾಯಿ ಕೂಲಿ ಮಾತ್ರ ಸಿಗುತ್ತಿದೆ. ಅದಕ್ಕಿಂತ ಜಾಸ್ತಿ ಸಿಗುವುದಿಲ್ಲ. ಕೂಲಿಗಾರರ ದೃಷ್ಟಿಯಿಂದಲಾದರೂ ಈ ಭಾಗವನಾದರೂ ಯೋಜನೆಯಲ್ಲಿ ಸೇರಿಸುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ಆಡಳಿತ ಹಾಗೂ ಇನ್ನಿತರ ಅನುಕೂಲತೆಯ ದೃಷ್ಟಿಯಿಂದ ತಾಲ್ಲೂಕಿನ ಒಂದು ಭಾಗವನ್ನು ತೆಗೆದುಕೊಳ್ಳಬಾರದೆಂದು ಯೋಜನಾ ಆಯೋಗದವರು ತಮ್ಮ ಅಭಿಪ್ರಾಯ ಕೊಟ್ಟಿದ್ದಾರೆ. ಆದಕಾರಣ ಮಾನ್ಯ ಸದಸ್ಯರು ಹೇಳಿದಂಥ ಭಾಗವನ್ನು ಸೇರಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎಸ್. ಎಸ್. ಅರಕೇರಿ.—ನನ್ನ ಪ್ರಶ್ನೆಗೆ ಸರಿಯಾದಂಥ ಉತ್ತರವನ್ನು ಕೊಡಲಿಲ್ಲ. ನಾನು ಕೇಳಿದಂಥ ಪ್ರಶ್ನೆಯೆಂದರೆ ಈ ಯೋಜನೆಯಲ್ಲಿ ಇಂಡಿ, ಜಮಖಂಡಿ, ಮುಧೋಳ ಮತ್ತು ಸಿಂದಗಿ ತಾಲ್ಲೂಕುಗಳನ್ನು ಕೈಬಿಟ್ಟಿರುವುದಕ್ಕೆ ಕಾರಣ ಶ್ರೀಮಾನ್ ನಾಡಗೌಡರ ಕಿತಾಪತಿಯಿಂದ ಹೊರತು ತಜ್ಞರ ಅಭಿಪ್ರಾಯದ ಪ್ರಕಾರ ಅಲ್ಲ ಎಂಬುದು. ಇದಕ್ಕೆ ತಾವು ಏನು ಹೇಳುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ನನಗೆ ಸುಳ್ಳು ಹೇಳುವ ಅಭ್ಯಾಸವಿಲ್ಲ. ಇದು ಒಂದೇ ಜಿಲ್ಲೆಯನ್ನು ಮಾತ್ರ ಆರಿಸಿಲ್ಲ. ಇದರ ಜೊತೆಗೆ ಇನ್ನೂ ಎರಡು ಜಿಲ್ಲೆಗಳನ್ನು ಆರಿಸಲಾಗಿದೆ. ಈ ಎರಡು ಜಿಲ್ಲೆಗಳಲ್ಲಿ ಆರಿಸಿರತಕ್ಕಂಥ ತಾಲ್ಲೂಕುಗಳಲ್ಲಿ ಕೇವಲ ಕಾಂಗ್ರೆಸ್ (ಒ) ಸದಸ್ಯರು ಮಾತ್ರವಿಲ್ಲ, ಇತರ ಪಕ್ಷದ ಸದಸ್ಯರೂ ಸಹ ಇದ್ದಾರೆ. ವಿವರ ಬೇಕಾದರೆ ಕೊಡುತ್ತೇನೆ. ಆದ್ದರಿಂದ ಮಾನ್ಯ ಸದಸ್ಯರು ಮಾಡತಕ್ಕಂಥ ಆರೋಪ ಸರಿಯಲ್ಲ.

Payment of Compensation for Lands Submerged in Kolal Hobli

111. Sri GANGA BOVI (Gulur).—Will the Minister for Revenue, be pleased to state :—

(*a*) when the new tank near Hosahalli village, Kolal Hobli Koratagere Taluk, Tumkur District, was constructed ;

(*b*) the reasons for not paying compensation amount to the land owners whose lands have been submerged in the tank bed ;

(*c*) when the compensation amount would be paid to them ;

(*d*) the persons responsible for this dealy and the action taken against them ?

Sri H. V. KOUJALGI (Minister for Revenue).—

(*a*) The exact date of construction of the tank is not known.

(*b*) The compensation amount is not paid a the as cquisition Proceedings are not yet finalised.

(*c*) As soon as the acquisition Proceedings are completed.

(*d*) No persons are held responsible for delay as necessary formalities have to be observed to acquire the land under the Land Acquisition Act and pass the Compensation award.

ಈ ಕೆರೆಯನ್ನು 1969-70ನೇ ಸಾಲಿನಲ್ಲಿ ನಿರ್ಮಾಣ ಮಾಡಲಾಗಿದೆ.

ಶ್ರೀ ಗಂಗಾಬೋವಿ.—ಈ ಕೆರೆಯ ನಿರ್ಮಾಣಕ್ಕೆ ಜಮೀನನ್ನು ಸ್ವಾಧೀನಪಡಿಸಿಕೊಂಡ ಮೇಲೂ ಕೂಡ ಇನ್ನೂ ಪರಿಹಾರ ಕೊಡದಿರುವುದಕ್ಕೆ ಕಾರಣವೇನು ?

† ಶ್ರೀ ಎಚ್. ವಿ. ಕೌಜಲಗಿ.—ಇದರಲ್ಲಿ ಯಾವುದೇ ದುರದ್ದೇಶವಿಲ್ಲ. 1969ನೇ ಇಸವಿಯಲ್ಲಿ ಭೂ ಸ್ವಾಧೀನ ಕಾರ್ಯ ಪ್ರಾರಂಭವಾಯಿತು. ಆದಷ್ಟು ಜಾಗ್ರತೆ ಪರಿಹಾರ ಹಣವನ್ನು ಕೊಡಲಾಗುತ್ತದೆ.

ಶ್ರೀ ಗಂಗಾಬೋವಿ.—ಆದಷ್ಟು ಜಾಗ್ರತೆ ಅಂದರೆ ಎಷ್ಟು ದಿವಸದಲ್ಲಿ ಕೊಡಲಾಗುತ್ತದೆ ?

ಶ್ರೀ ಎಚ್. ವಿ. ಕೌಜಲಗಿ.—3-4 ತಿಂಗಳಲ್ಲಿ ಸಿಗಬಹುದು.

Dress Restriction Imposed by the Bowring Institute, Bangalore

122. **Sri M. NAGAPPA** (Raichur).—Will the Minister for Finance, Planning and Youth Welfare be pleased to state :—

(*a*) whether it is a fact that Government has granted a bar licence on nominal charges to the Bowring Institute, Bangalore very recently ?

(*b*) whether it is also a fact that Government is providing all sorts of benefits to the said Institute such as granting raffles licences, fetes, land on lease and licence for housing games with substantial financial aid ;

(*c*) whether it is a fact that the said Institute has imposed dress restriction and they do not admit people wearing dhoti with chappals ;

(*d*) if so, the action the Government proposes to take against the Institution in the matter ?

Sri RAMAKRISHNA HEGDE (Minister for Finance, Planning and Youth Weifare).—

(*a*) No.

(*b*) Except the following, no other benefits have been provided :—

(1) Land leased anterior to Retrocession ;

(2) Licence for Housie Game granted in January 1963.

(*c*) Yes. The Institute has imposed dress restriction for the evening functions as per Bye-law of the institute,

(*d*) Does not arise in view of reply to Clause (*c*).